# ಗಣಿತಜ್ಞೆ ವಿದ್ಯಾ ಬಾಲನ್



ವಿದ್ಯಾ ಬಾಲನ್ ತನ್ನ ಹೊಸ ಸಿನಿಮಾ ಬಗ್ಗೆ ಸಾಕಷ್ಟು ಥ್ರಿಲ್ ಆಗಿರುವ ಸುದ್ದಿ ಬಂದಿದೆ. ಭಾರತದ ವಿಶ್ವವಿಖ್ಯಾತ ಗಣಿತಜ್ಞೆ, ಶಕುಂತಲಾ ದೇವಿಯ ಜೀವನ ಆಧರಿಸಿದ ಹೊಸ ಸಿನಿಮಾದ ಬಗ್ಗೆ ವಿದ್ಯಾಗೆ ಸಾಕಷ್ಟು ನಿರೀಕ್ಷೆಗಳಿವೆ. ಕಳೆದ ತಿಂಗಳು 15ರಂದು 'ವಿಶ್ವ ಗಣಿತ ದಿನ'ದಂದೇ ಸೆಟ್ಟೇರಿದ ಈ ಸಿನಿಮಾದಲ್ಲಿ ವಿದ್ಯಾ ಸಂಪೂರ್ಣ ಪರಕಾಯ ಪ್ರವೇಶ ಮಾಡಿದ್ದಾಳೆಂಬ ಸುದ್ದಿ ಇದೆ. ಶಕುಂತಳಾ ದೇವಿಯ ಮೇಕಪ್‌ನಲ್ಲಿ ವಿದ್ಯಾಳ ಮೊದಲ ಫೋಟೊ ಹೊರಬಂದಾಗ ಬಾಲಿವುಡ್ ನಿಜಕ್ಕೂ ಬೆರಗಾಗಿತ್ತು. ಶಕುಂತಳಾ ದೇವಿಯ ಅದೇ ಬಾಬ್‌ಕಟ್‌ನೊಂದಿಗೆ ಸೀರೆ ಇಟ್ಟು ಇಡೀ ಪಾತ್ರವೇ ತಾನಾದಂತೆ ವಿದ್ಯಾ ಕಾಣಿಸುತ್ತಿದ್ದಳು. ಚಿತ್ರದ 'ಪ್ರಮೋ' ಸಲುವಾಗಿ ವಿದ್ಯಾ ಗಣಿತದ ಸಮಸ್ಯೆಯೊಂದನ್ನು ವೀಕ್ಷಕರ ಮುಂದಿಡುವ ವಿಡಿಯೊ ಕೂಡಾ ಈಗಾಗಲೆ ವೈರಲ್ ಆಗಿದೆ. ಎಲ್ಲ ಅಂದುಕೊಂಡಂತೆ ಮುಗಿದರೆ, ಮುಂದಿನ ಮಾರ್ಚ್‌ಗೆ ಚಿತ್ರ ಬಿಡುಗಡೆ ಕಾಣಲಿದೆ.

ಈ ಮಧ್ಯೆ 'ಪಾ' ಎಂಬ ಯಶಸ್ವಿ ಚಿತ್ರದಲ್ಲಿ ಅಮಿತಾಭ್‌ಗೆ ಹೊಸ ಲುಕ್ ಕೊಟ್ಟಿದ್ದ ನಿರ್ದೇಶಕ ಆರ್. ಬಾಲ್ಕಿ ನಿರ್ದೇಶನದ 'ಮಹಿಳಾ ಮಂಡಲಿ' ಎಂಬ ಇನ್ನೊಂದು ಹೊಸ ಚಿತ್ರದಲ್ಲೂ ವಿದ್ಯಾ ನಾಯಕಿ. ಅಕ್ಷಯ ಕುಮಾರ್ ನಾಯಕನಾಗಿರುವ ಈ ಸಿನಿಮಾ ಮುಂದಿನ ಮೇ ತಿಂಗಳಲ್ಲಿ ಬಿಡುಗಡೆಯಾಗಲಿದೆ. ಈ ಚಿತ್ರದಲ್ಲೂ ವಿದ್ಯಾಗೆ ಸವಾಲಾಗುವಂತಹ ಪಾತ್ರವಿದೆ. ಎರಡೂ ಚಿತ್ರಗಳ ಮೂಲಕ ಮುಂದಿನ ವರ್ಷ ವಿದ್ಯಾ ಮತ್ತೆ ಬಾಲಿವುಡ್‌ನ ಮುಖ್ಯವಾಹಿನಿಯಲ್ಲಿ ಮಿಂಚಲಿದ್ದಾಳೆ.

# 'ಸ್ಲೋ' ರಾಧಿಕಾ



ಬಾಲಿವುಡ್‌ನಲ್ಲಿ ಅಭಿನಯದ ವಿಷಯ ಬಂದರೆ ವಿದ್ಯಾಳಷ್ಟೇ ಪ್ರಭಾವಶಾಲಿಯಾಗಿ ಪಾತ್ರಗಳನ್ನು ನಿರ್ವಹಿಸುತ್ತಿರುವವಳು ರಾಧಿಕಾ ಆಪ್ಟೆ. ತೆರೆಯ ಮೇಲೆ ಹಳ್ಳಿ ಗೃಹಿಣಿಯ ಪಾತ್ರದಲ್ಲಿ ಮಿಂಚಿದಂತೆಯೇ, ತೆರೆಯ ಹೊರಗೆ ಬಿಕಿನಿಧಾರಿ, ಮಾಡರ್ನ್ ವಸ್ತ್ರಗಳಲ್ಲಿ ಈಕೆ ಮಿಂಚುತ್ತಿದ್ದಾಳೆ. ಗಾಸಿಪ್ ಕಾಲಂನಲ್ಲಿ ಈಕೆಯ ಮದುವೆಯ ಬಗ್ಗೆ, ಡೇಟಿಂಗ್ ಬಗ್ಗೆ ಪದೇ ಪದೇ ಚಿತ್ರವಿಚಿತ್ರ ಸುದ್ದಿಗಳು ಹಬ್ಬುತ್ತವೆ. ಆದರೆ ಅಭಿನಯದ ವಿಷಯದಲ್ಲಿ ಈಕೆಯತ್ತ ಯಾರೂ ಬೆರಳು ತೋರಿಸುವಂತಿಲ್ಲ. ಅಕ್ಷಯ ಕುಮಾರ್ ಜೊತೆಗೆ 'ಪ್ಯಾಡ್‌ಮ್ಯಾನ್', ರಜನಿಕಾಂತ್ ಜೊತೆಗೆ 'ಕಬಾಲಿ', ಆಯುಷ್ಮಾನ್ ಖುರಾನಾ ಜೊತೆಗೆ 'ಅಂಧಾಧುನ್'– ಹೀಗೆ ಈಕೆಯ ಜೊತೆಗೆ ನಟಿಸಿರುವ ನಾಯಕರ ಪಟ್ಟಿಯೂ ವೈವಿಧ್ಯಮಯ. ಬಹುತೇಕ ಹಿಟ್ ಚಿತ್ರಗಳಲ್ಲಿ ನಟಿಸಿದರೂ ಈಕೆಗೆ ಕೈತುಂಬ ಅವಕಾಶಗಳಿಲ್ಲ. ಆದರೆ ಕೈಯಲ್ಲಿರುವ ಚಿತ್ರಗಳು ಮಾತ್ರ ಪ್ರಭಾವಶಾಲಿ ಬ್ಯಾನರ್‌ಗಳದ್ದೇ.

ಖ್ಯಾತ ನಿರ್ದೇಶಕ ಶ್ರೀರಾಂ ರಾಘವನ್ ಈಕೆಯ ಹೊಸ ಚಿತ್ರ 'ಶೂಟ್ ದಿ ಪಿಯಾನೊ ಪ್ಲೇಯರ್' ನಿರ್ದೇಶಿಸುತ್ತಿದ್ದಾನೆ. ಹಾಗೆಯೇ ಹನಿ ಟ್ರೆಹಾನ್ ನಿರ್ದೇಶಿಸುತ್ತಿರುವ 'ರಾತ್ ಅಖೇಲಿ ಹೈ'ಯಲ್ಲಿ ರಾಧಿಕಾ ವಿಭಿನ್ನ ಪಾತ್ರ ನಿರ್ವಹಿಸುತ್ತಿದ್ದಾಳೆ. ಎರಡೂ ಚಿತ್ರಗಳು ಮುಂದಿನ ವರ್ಷ ಉತ್ತರಾರ್ಧದಲ್ಲಿ ತೆರೆ ಕಾಣಲಿವೆ. ರಾಧಿಕಾಳಿಗೆ ಇರುವ ಥಿಯೇಟರ್ ಅನುಭವದ ಹಿನ್ನೆಲೆಯೇ ಅತ್ಯುತ್ತಮ ಪಾತ್ರಗಳನ್ನು ಒದಗಿಸುತ್ತಿದೆ. ಮರಾಠಿ ಸಿನಿಮಾಕ್ಕೆ ಎಂಟ್ರಿ ಕೊಡುವ ಮುನ್ನವೇ ಏಳು ಭಾಷೆಗಳ ನಾಟಕಗಳಲ್ಲಿ ನಟಿಸಿರುವ ಈ ಅಭಿನೇತ್ರಿ ಸದ್ಯಕ್ಕಂತೂ ಸ್ವಲ್ಪ ಸ್ಲೋ ಆಗಿರುವುದು ನಿಜ.

■ ಹನಿ